Reg. No. | | | | | | | | | |

**BCMKAL 103**

## ಗುಣಾಂಕ ಆಧಾರಿತ ಮೊದಲನೆಯ ಸೆಮಿಸ್ಟರ್ ಬಿ.ಕಾಂ. ಪದವಿ ಪರೀಕ್ಷೆ, ಅಕ್ಟೋಬರ್/ನವೆಂಬರ್ 2016

### ಕನ್ನಡ

### ಕನ್ನಡ ಭಾಷಾ ಪತ್ರಿಕೆ – I

### (Common to all Batches)

Time : 3 Hours

Max. Marks : 80

### ಭಾಗ – 1

### ಕಾವ್ಯ

I. ಅ) ಕೆಳಗಿನ ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿರಿ. (1×8=8)

1) ದುಷ್ಟಬುದ್ಧಿಯ ದುಷ್ಟತನದಿಂದ ಚಂದ್ರಹಾಸ ಪಾರಾದ ಬಗೆಯನ್ನು ವಿವರಿಸಿರಿ.

2) ಬಸವಣ್ಣನ ಆತ್ಮ ವಿಮರ್ಶೆಯನ್ನು ಆತನ ವಚನಗಳ ಮೂಲಕ ವಿವರಿಸಿರಿ.

ಆ) ಕೆಳಗಿನ ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. (1×5=5)

1) ಮಾಸ್ತಿಯವರ ವ್ಯಕ್ತಿ ಚಿತ್ರಣವನ್ನು ಕವಿ ನಿಸಾರ್ ಅಹಮ್ಮದ್ ತಮ್ಮ ಕವನದಲ್ಲಿ ಸೆರೆ ಹಿಡಿದ ಬಗೆಯನ್ನು ಚಿತ್ರಿಸಿ.

2) ದೈವಶಕ್ತಿಯ ಸಾರ್ವಕಾಲಿಕತೆಯನ್ನು "ಕೃಷ್ಣಶಕ್ತಿ" ಕವನ ಹೇಗೆ ಸಮರ್ಥಿಸುತ್ತದೆ ? ವಿವರಿಸಿ.

ಇ) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ. (2×3=6)

1) ವಚನಗಳು

2) ಸವಿತಾ ನಾಗಭೂಷಣ

3) ಕೆ.ಎಸ್. ನರಸಿಂಹಸ್ವಾಮಿ.

II. ಅ) ಕೆಳಗಿನ ಒಂದು ಪದ್ಯಭಾಗದ ಸಂದರ್ಭ ಸೂಚಿಸಿ ಭಾವ ಸ್ವಾರಸ್ಯವನ್ನು ಬರೆಯಿರಿ. (1×5=5)

1) ಹಾವು ತಿಂದವರ ನುಡಿಸಬಹುದು, ಗರ ಹಿಡಿದವರ ನುಡಿಸಬಹುದು
ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯಾ,
ಬಡತನವೆಂಬ ಮಂತ್ರವಾದಿ ಬರಲು, ಒಡನೆ ನುಡಿವರಯ್ಯ
ಕೂಡಲ ಸಂಗಮದೇವಾ.

P.T.O.

2) ನನ್ನ ಗಂಡನ ಜೊತೆಯ ಜೀತಗಾರರ ಕಥೆಯು
ಯಾವ ಹಾಡಿನ ಒಳಗೂ ಮೂಡಲಿಲ್ಲ.
ರಾಜ್ಯದಾಹದ ಬೆಂಕಿ ಊರೂರ ಸುಟ್ಟಾಗ
ಬೂದಿಯಾದರೊ ಅವರು ತಿಳಿಯಲಿಲ್ಲ.

ಆ) ಕೆಳಗಿನ ವಾಕ್ಯಗಳಲ್ಲಿ ಎರಡರ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ. **(2×3=6)**

1) ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.
2) ನೀರಲ್ಲ; ಈ ಹೊಳೆಯ ತುಂಬೆಲ್ಲ ಎಳನೀರು!
3) ಮರದ ಮರೆಯೊಳಗೆ ಮೂಡಿಹನು ಚಂದಿರ.

III. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ. **(5×1=5)**

1) ಲಕ್ಷ್ಮೀಶನ ಕಾವ್ಯದ ಹೆಸರೇನು ?
2) 'ಕನ್ನಡದ ಆಸ್ತಿ' ಎಂದು ಹೆಸರು ಪಡೆದ ಕವಿ ಯಾರು ?
3) 'ಬೆಂಗಳೂರಿನ ಹಾಡು' ಕವನದ ಕರ್ತೃ ಯಾರು ?
4) ನಿರೂಪಕ ಮತ್ತು ರಾಮಯ್ಯ ಸ್ನಾನಕ್ಕೆಂದು ಯಾವ ನದಿಗೆ ಹೋದರು ?
5) ಸುತ್ರಾಮ ತನಯ ಎಂದರೆ ಯಾರು ?

## ಭಾಗ–2

## ಗದ್ಯ

IV. ಅ) ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿರಿ. **(1×8=8)**

1) ದೇವರನ್ನು ಕುರಿತು ಮಾನವನ ಚಿಂತನೆ ಹೇಗೆ ಸಾಗಿ ಬಂದಿರಬಹುದೆಂದು ಲೇಖಕರು ತಿಳಿಸಿದ್ದಾರೆ ? ವಿವರಿಸಿ.
2) ಪರಿಸರದ ಕುರಿತು ಜನಜಾಗೃತಿಯನ್ನು ನಾಗೇಶ್ ಹೆಗಡೆಯವರ ಲೇಖನ ಹೇಗೆ ಉಂಟು ಮಾಡುತ್ತದೆ?

ಆ) ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿರಿ. **(1×8=8)**

1) ಮುಸ್ಲಿಂ ಧರ್ಮ ಮತ್ತು ಸಮಾಜದ ಬದುಕನ್ನು 'ನೋಂಬು' ಕಥೆ ಹೇಗೆ ಚಿತ್ರಿಸುತ್ತದೆ ? ವಿವರಿಸಿರಿ.
2) ಪ್ರಭುಲಿಂಗನ ಬಾಲ್ಯ ಮತ್ತು ವಿದ್ಯಾಭ್ಯಾಸದ ಅನುಭವಗಳನ್ನು ವಿವರಿಸಿರಿ.

ಇ) ಯಾವುದಾದರೂ ಒಂದನ್ನು ಸಂಕ್ಷಿಪ್ತವಾಗಿ ವಿವರಿಸಿರಿ. **(1×5=5)**

1) ವೀರ ನಾಗಮ್ಮ.
2) ಪ್ರಕೃತಿ ಶಕ್ತಿಗಳು.

V. ಕೆಳಗಿನ ಒಂದು ಪ್ರಶ್ನೆಗೆ ಉತ್ತರಿಸಿರಿ. (1×5=5)

1) "ಅಂಜನೇಯ ವಿಗ್ರಹವನ್ನು ಮುಟ್ಟಲು ನನಗೆ ಹಿಂದೆಂದೂ ಅವಕಾಶ ಸಿಕ್ಕಿರಲಿಲ್ಲ". ಲೇಖಿಕರ ಮಾತಿನಲ್ಲಿ ವ್ಯಕ್ತವಾಗುವ ನೋವಿನ ಧ್ವನಿಯನ್ನು ವಿವರಿಸಿರಿ.

2) ಅಪ್ಪಣ್ಣ ಚಿಕ್ಕಪ್ಪಯ್ಯ ಮತ್ತು ಜಲಜ ಚಿಕ್ಕಮ್ಮ ಇವರ ಪ್ರೀತಿಯ ವ್ಯಕ್ತಿತ್ವ ಕಥೆಯಲ್ಲಿ ಹೇಗೆ ಚಿತ್ರಿತಗೊಂಡಿದೆ ? ವಿವರಿಸಿರಿ.

3) "ಪರಿಸರ ಧ್ವಂಸ ಮಾಡುವವರಿಗಾಗಿ ಪ್ರತ್ಯೇಕ ಪಾಠದ ವ್ಯವಸ್ಥೆ ಜಾರಿಗೆ ಬರಬೇಕು" – ಲೇಖಕರ ಮಾತನ್ನು ಸಮರ್ಥಿಸಿರಿ.

VI. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ. (4×1=4)

1) ಕಪಿಲ್ ಭಟ್ಟಾಚಾರ್ಯ ಯಾರು ?

2) ಜಲಜ ಚಿಕ್ಕಿಗೆ ಚಿಕ್ಕಪ್ಪಯ್ಯನ ಬಸಗೆ ಒಯ್ದವರು ಯಾರು ?

3) ವಿಶ್ವೇಶ್ವರಯ್ಯ ವಿಜ್ಞಾನ ವಸ್ತು ಸಂಗ್ರಹಾಲಯ ಎಲ್ಲಿದೆ ?

4) ಪ್ರಭುಲಿಂಗನ ತಂದೆಯ ಹೆಸರೇನು ?

## ಭಾಗ – 3

## ಕ್ರಿಯಾತ್ಮಕ ಕನ್ನಡ

VII. ಒಂದು ಪ್ರಶ್ನೆಗೆ ಉತ್ತರಿಸಿರಿ. (1×8=8)

1) ವ್ಯವಹಾರ ಪತ್ರದ ವಿವಿಧ ಅಂಗಗಳನ್ನು ವಿವರಿಸಿರಿ.

2) ಆದೇಶ ಪತ್ರ ಎಂದರೇನು ? ಅದರ ಸ್ವರೂಪವನ್ನು ತಿಳಿಸಿ, ಮಾದರಿ ಪತ್ರವೊಂದನ್ನು ರಚಿಸಿ.

VIII. ಒಂದು ಪ್ರಶ್ನೆಗೆ ಉತ್ತರಿಸಿರಿ. (1×5=5)

1) ಆಧುನಿಕ ಕಾಲದ ಭೂ ವರ್ಗಾವಣೆಯ ನಿಯಮಗಳೇನು ? ವಿವರಿಸಿ.

2) ಭೂ ಪರಿವರ್ತನೆ ಎಂದರೇನು ? ಇದಕ್ಕೆ ಸಂಬಂಧಿಸಿದ ನಿಯಮಗಳನ್ನು ತಿಳಿಸಿ.

IX. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ. (2×1=2)

1) ಸಮಾಧಾನ ಪತ್ರ ಎಂದರೇನು ?

2) 'ಆರ್.ಟಿ.ಸಿ.' ಎಂಬುದಕ್ಕೆ ಕನ್ನಡದಲ್ಲಿ ಏನೆಂದು ಕರೆಯುತ್ತಾರೆ ?